# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/BCD/1272/2021
ಮಂಡನಾಧಿಕಾರಿಗಳ ಶಾಖೆ : ARE-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 28/03/2022.
6-4-22

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ.ವೈ.ಆರ್.ಹರೀಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುತ್ತನಲ್ಲೂರು, ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೋಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೋಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ.ವೈ.ಆರ್.ಹರೀಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುತ್ತನಲ್ಲೂರು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಮಂಜುನಾಥ.ಎಂ ಬಿನ್ ಲೇಟ್ ಮದ್ದೂರಪ್ಪ, ನಾರಾಯಣ ಘಟ್ಟ ಗ್ರಾಮ, ಮುತ್ತನಲ್ಲೂರು, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರುದಾರರು ತನ್ನ ದೂರಿನಲ್ಲಿ, ನಾರಾಯಣ ಘಟ್ಟ ಗ್ರಾಮದ ಶ್ರೀ ಕೃಷ್ಣಪ್ಪ ಎಂಬುವರಿಂದ, ಸರ್ವೆ ನಂ: 150/03 ರಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ, ಭೂ ಪರಿವರ್ತನೆಯಾಗಿದ್ದ, ವಿಸ್ತೀರ್ಣ 30 x 40 ಅಡಿ ಅಳತೆಯ ನಿವೇಶನವನ್ನು ಖರೀದಿ ಮಾಡಿ, ಮನೆ ಕಟ್ಟಲು ಸಾಲ ಪಡೆಯುವ ಉದ್ದೇಶದಿಂದ ನಿವೇಶನಕ್ಕೆ ಸಂಬಂಧಪಟ್ಟಂತೆ 11 ಬಿ ಖಾತೆ ಪಡೆಯುವ ಸಲುವಾಗಿ ದಾಖಲೆಗಳೊಂದಿಗೆ ಅರ್ಜಿಯನ್ನು, ದಿನಾಂಕ: 09–06–2016 ರಂದು ಎದುರುದಾರರು ಕಚೇರಿಗೆ

ಸಲ್ಲಿಸಿರುತ್ತಾರೆ. ದಿನಾಂಕ: 21-06-2016 ರಂದು, ದೂರುದಾರರು 11 ಬಿ ಖಾತೆ ಬಗ್ಗೆ, ಎದುರುದಾರರನ್ನು ವಿಚಾರಿಸಿದಾಗ, ಎದುರುದಾರರು 20,000/- ರೂ.ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದೇ ದಿನ ದೂರುದಾರರಿಂದ ಲಂಚದ ಹಣ ಮುಂಗಡವಾಗಿ 10,000/- ರೂ.ಗಳನ್ನು ಪಡೆದು, ಅದೇ ದಿನ ಎದುರುದಾರರ ಅರ್ಜಿಗೆ ಸಕಾಲ ನಂ: ಪಿಆರ್ 0011004988467 ಅನ್ನು ನೀಡಿರುತ್ತಾರೆ. ಉಳಿದ ಲಂಚದ ಹಣ 10,000/- ರೂಪಾಯಿಗಳನ್ನು ರೆಡಿ ಮಾಡಿಕೊಂಡು ಬಂದು ಕೊಟ್ಟರೆ 3-4 ದಿನಗಳಲ್ಲಿ ಖಾತೆ ಮಾಡಿಕೊಡುವುದಾಗಿ ಎದುರುದಾರರು ಹೇಳಿರುತ್ತಾರೆ. ಅದರಂತೆ, ದೂರುದಾರರು ದಿನಾಂಕ: 28-06-2016 ರಂದು ಬೆಳಿಗ್ಗೆ ಎದುರುದಾರರು ಕಚೇರಿಯಲ್ಲಿ ಭೇಟಿ ಮಾಡಿ, ಉಳಿದ ಲಂಚದ ಹಣವನ್ನು ಕೊಡುವುದಾಗಿ ತಿಳಿಸಿರುತ್ತಾರೆ. ಎದುರುದಾರರು ದೂರುದಾರರಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು, ದೂರುದಾರರು ತಮ್ಮ ಮೊಬೈಲ್ ಪೋನಿನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ, ದಿನಾಂಕ: 29-06-2016 ರಂದು ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯವರ ಮುಂದೆ ಸಂಭಾಷಣೆಯಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ ಮೊಕದ್ದಮೆ ಸಂಖ್ಯೆ: 02/2016 ಪಿಸಿ ಕಾಯಿದೆ 1988, ಕಲಂ 7 ರನ್ವಯ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

3. ದಿನಾಂಕ: 29/6/2016 ರಂದು, ತನಿಖಾಧಿಕಾರಿಯವರು ಪಂಚರಾದ ಸತೀಶ್ ರಾಜಾಜಿಗೌಡ ಪಂಚ-1, ಶ್ರೀ ರಮೇಶ್ ಪಂಚ-2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 10,000/- (ಹಣದ ಡಿನಾಮಿನೇಷನ್ 500/- x 20) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚರುಗಳು ಸದರಿ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಅದನ್ನು ಪ್ರತ್ಯೇಕ ಹಾಳೆಯಲ್ಲಿ ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ-1 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ 10,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರ ಧರಿಸಿದ್ದ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತಮ್ಮ ಕೈಯಿಂದ ತಮ್ಮ ತಲೆಯನ್ನು ಸವರುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ದೂರುದಾರರು ತಮ್ಮ ಮೊಬೈಲ್ ನಲ್ಲಿ ವ್ಯಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಂಡು ಹೋಗಬೇಕೆಂದು ಸೂಚನೆ ನೀಡಿರುತ್ತಾರೆ. ಮತ್ತು ಪಂಚ-1 ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ ದಿ: 29/6/2016ರಂದು ಮ: 1.00 ಗಂಟೆಯಿಂದ 1.45 ರವರೆಗೆ ಬರೆದಿರುತ್ತಾರೆ.

4. ದಿನಾಂಕ: 29/6/2016 ರಂದು ತನಿಖಾಧಿಕಾರಿಯವರು ದೂರುದಾರರನ್ನು ಮತ್ತು ಪಂಚರನ್ನು ಹಾಗೂ ಸಿಬ್ಬಂದಿಯವರನ್ನು ಕರೆದುಕೊಂಡು ಮಧ್ಯಾಹ್ನ 1.50 ಗಂಟೆಗೆ ಠಾಣೆಯನ್ನು ಬಿಟ್ಟು, ಸುಮಾರು 2.50 ಗಂಟೆಗೆ ಮುತ್ತನಲೂರು ಗ್ರಾಮಕ್ಕೆ ತಲುಪಿರುತ್ತಾರೆ. ನಂತರ, ತನಿಖಾಧಿಕಾರಿಯು ದೂರುದಾರರಿಗೆ ಮತ್ತು ಪಂಚ-1 ಇವರಿಗೆ ಮತ್ತೊಮ್ಮೆ ಸೂಚನೆಯನ್ನು ನೀಡಿ, ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿಕೊಟ್ಟಿರುತ್ತಾರೆ. ಅದರಂತೆ, ದೂರುದಾರರು ಪಂಚ-1 ರವರ ಜೊತೆ ಮ: 3.10 ಕ್ಕೆ ಹೋಗಿ ಎದುರುದಾರರನ್ನು ಭೇಟಿ ಮಾಡಿ, ಕೆಲಸದ ಬಗ್ಗೆ ವಿಚಾರಿಸಿದಾಗ. ಎದುರುದಾರರು ದೂರುದಾರರಿಂದ ರೂ.10,000/- ಲಂಚದ ಹಣವನ್ನು ಎಡಗೈಯಿಂದ ಸ್ವೀಕರಿಸಿ ತನ್ನ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ, ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ನೀಡಿದಾಗ, ತನಿಖಾಧಿಕಾರಿಯು ದೂರುದಾರರ ಸೂಚನೆಯನ್ನು ಅನುಸರಿಸಿ, ತನಿಖಾಧಿಕಾರಿಯು ಸ್ಥಳಕ್ಕೆ ಬಂದಾಗ, ದೂರುದಾರರು ಲಂಚ ಪಡೆದ ಎದುರುದಾರರನ್ನು ತನಿಖಾಧಿಕಾರಿಗೆ ತೋರಿಸಿಕೊಟ್ಟಿರುತ್ತಾರೆ. ನಂತರ, ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು ಅವರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿಬ್ಬಂದಿಯು ಎದುರುದಾರರ ಎಡಗೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ಅದ್ದಿ ತೊಳೆದಾಗ, ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ಲಂಚದ ಹಣದ ಬಗ್ಗೆ ವಿಚಾರಿಸಿ ಹಾಜರುಪಡಿಸುವಂತೆ ತಿಳಿಸಿದಾಗ, ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚ-2 ರವರು ಎದುರುದಾರರು ದರಿಸಿದ್ದ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇದ್ದ ಲಂಚದ ಹಣವನ್ನು ಹೊರತೆಗೆದು ಪರಿಶೀಲಿಸಿದಾಗ, ಅದರಲ್ಲಿ 10,000/- ರೂ. ಲಂಚದ ಹಣದ ನೋಟಿನ ಮೌಲ್ಯ ಮತ್ತು ನಂಬರನ್ನು ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿ, ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚರು ಎದುರುದಾರರ ಪ್ಯಾಂಟಿನ ಎಡಭಾಗದ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ ಸದರಿ ಪ್ಯಾಂಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

5. ನಂತರ, ತನಿಖಾಧಿಕಾರಿಯವರು, ಎದುರುದಾರರು ದೂರುದಾರರಿಂದ ಪಡೆದ ಲಂಚದ ಹಣಕ್ಕೆ ಸಮಜಾಯಿಷಿಕೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತನ್ನ ಸಮಜಾಯಿಷಿಯನ್ನು **"..... ನಾನು ಮದ್ಯಾಹ್ನ 3-00 ಗಂಟೆಗೆ ಕಛೇರಿಯಿಂದ ಊಟಕ್ಕೆ ಹೋಗುವ ಸಮಯದಲ್ಲಿ ಒಬ್ಬ ವ್ಯಕ್ತಿ ನನ್ನ ಬಳಿಗೆ ಬಂದು ಜೇಬಿನಲ್ಲಿ ಏನೊ ಇಟ್ಟನು. ಏನು ಎಂದು ನಾನು ಕೇಳಿದಾಗ ಕೆಳಗಡೆ ಹೋದನು. ನನ್ನ ಎಡಗೈಯನ್ನು ಜೇಬಿನಲ್ಲಿ ಇಟ್ಟು ಪರೀಕ್ಷಿಸಿದಾಗ ನೋಟಿನ ಕಂತೆ ಇತ್ತು. ನಾನು ಅದನ್ನು ತೆಗೆದುಕೊಂಡು ಮಹಡಿಯಿಂದ ಇಳಿದು ವಾಪಸ್ ಕೊಡಲು ಹೋದಾಗ ಯಾರೋ ಬಂದು ಪಂಚಾಯ್ತಿ ಕಛೇರಿ ಮುಂಭಾಗ ನನ್ನ ಕೈಗಳನ್ನು ಹಿಂದಿನಿಂದ ಹಿಡಿದುಕೊಂಡು ನಾವು ಎ.ಸಿ.ಬಿ. ಬೆಂಗಳೂರು ನಗರ ಜಿಲ್ಲೆ ಎಂದು ತಿಳಿಸಿ ನಿಮ್ಮನ್ನು ಟ್ರ್ಯಾಪ್ ಮಾಡಲಾಗಿದೆ ಎಂದು**

ತಿಳಿಸಿದರು", ಎಂಬುದಾಗಿ ಲಿಖಿತ ಸಮಜಾಯಿಷಿ ನೀಡಿರುತ್ತಾರೆ. ತನಿಖಾಧಿಕಾರಿಯು ಪ್ರಕರಣಕ್ಕೆ ಸಂಬಂಧಿಸಿದಂತೆ, ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ, ದಿನಾಂಕ: 29/06/2016 ರಂದು ಮ: 3.20 ರಿಂದ 6.30 ಗಂಟೆಯವರೆಗೆ ಎದುರುದಾರರ ಕಛೇರಿಯಲ್ಲಿ ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

6. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವುದಾಗಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ.

7. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ನಿಮ್ಮಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

8. ದಿನಾಂಕ: 28/7/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 25/11/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 2(i) ರಿಂದ (v) ರವರೆಗೆ ಅಂಶಗಳನ್ನು ಸಾರಸಗಟವಾಗಿ ಅಲ್ಲಗಳೆದಿರುತ್ತಾರೆ. ಹಾಗೂ ಕಂಡಿಕೆ 3ರ ಅಂಶವನ್ನು ಸಹ ಅಲ್ಲಗಳೆದಿರುತ್ತಾರೆ. ಮುಂದುವರೆದು, ತಾನು ದೂರುದಾರರಲ್ಲಿ ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ, ಹಾಗೂ ಪಡೆದಿರುವುದಿಲ್ಲ ಎಂದು ಹೇಳಿರುತ್ತಾರೆ. ನಂತರ, ದಿ: 29/6/2016 ರಂದು ಸುಮಾರು 3.00 ಗಂಟೆ ಸಮಯದಲ್ಲಿ ತಾನು ಮೊದಲನೇ ಮಹಡಿಯಿಂದ ಊಟಕ್ಕೆ ಹೋಗುವ ವೇಳೆಯಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಏಕಾಏಕಿ ಬಂದು ತನ್ನ ಪ್ಯಾಂಟಿನ ಎಡ ಜೇಬಿಗೆ ಏನನ್ನೋ ಇಟ್ಟು ಹೋದನು. ನಂತರ ಎದುರುದಾರರು ಅದನ್ನು ಪರಿಶೀಲಿಸಲು, ತನ್ನ ಎಡಗೈಯನ್ನು ಪ್ಯಾಂಟಿನ ಎಡಬಾಗದ ಜೇಬಿನಲ್ಲಿ ಇಟ್ಟು, ಹೊರತೆಗೆದು ಪರಿಶೀಲಿಸಿದಾಗ, ನೋಟುಗಳು ಕಂಡುಬಂದವು. ಆ ಸಮಯದಲ್ಲಿ ಕೆಲವು ವ್ಯಕ್ತಿಗಳು ಬಂದು ತನ್ನನ್ನು ಹಿಡಿದುಕೊಂಡು, ತಾವು ಎ.ಸಿ.ಬಿ. ಪೊಲೀಸರು ಎಂದು ಹೇಳಿ ತನ್ನನ್ನು ಟ್ರ್ಯಾಪ್ ಮಾಡಿರುತ್ತಾರೆಂದು ಹೇಳಿರುತ್ತಾರೆ. ಅಲ್ಲದೆ, ತಾನು ದೂರುದಾರರಿಗೆ 11(ಬಿ) ಖಾತಾ ನೀಡಲು ಬರುವುದಿಲ್ಲವೆಂದು ಹಿಂಬರಹವನ್ನು ಸಹ ನೀಡಿರುವುದಾಗಿ ತಿಳಿಸಿರುತ್ತಾರೆ. ದೂರುದಾರರು ತನ್ನ ದೂರಿನಲ್ಲಿ ಹೇಳಿರುವ ಅಂಶಗಳು ಸುಳ್ಳು ಮತ್ತು ಆಧಾರ ರಹಿತವಾಗಿರುತ್ತವೆ. ಹಾಗಾಗಿ ತನ್ನನ್ನು ಇಲಾಖಾ ವಿಚಾರಣೆಯಿಂದ ಕೈಬಿಡಬೇಕೆಂದು ಕೋರಿದ್ದಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ

ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

9. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/4/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು